# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಓ ಎಸ್ ನಂ.128-2011** **ಪಿ. ಡಬ್ಲುಃ 1**

| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮೂರ್ತಿ<br>ನಂಜನಗೂಡು |
| --- | --- |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 08-04-2022. |

**ಪಾಟೀ ಸವಾಲುಃ ಪ್ರತಿವಾದಿ-11 ಮತ್ತು 12 ಪರ ಶ್ರೀ ಎಸ್.ವಿ ವಕೀಲರಿಂದಃ**

ನಿಡಿ-17 ರಲ್ಲಿ ಕಾಣಿರುವ ಅಪ್ಪಯ್ಯ ನನಗೆ ತಾತ ಆಗಬೇಕು. ನನ್ನ ಅಜ್ಜಿ ಹೆಸರು ನನಗೆ ಗೊತ್ತಿಲ್ಲ. ನಿಡಿ-17 ರಲ್ಲಿ ನಾನು ಪೂರ್ಣ ವಿವರ ನೀಡಿಲ್ಲ ಎಂದರೆ ಸರಿಯಲ್ಲ. ನಿಡಿ-17 ರಲ್ಲಿ ಕಾಣಿಸಿರುವ ಗೌರಮ್ಮ ನಿಮಗೆ ಏನಾಗಬೇಕು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಾಗೇ ನಿಡಿ-17 ರಲ್ಲಿ ತೋರಿಸಿರುವ ಮಿಣಕಮ್ಮ ಏನಾಗಬೇಕು ಎಂದರೆ ಸಾಕ್ಷಿಯು ಮಿಣಕಮ್ಮ ನನ್ನ ಸೋದರ ಅತ್ತೆ ಎಂದು ನುಡಿಯುತ್ತಾರೆ. ಮಿಣಕಮ್ಮ ಬದುಕಿದ್ದಾಳೋ ಇಲ್ಲವೋ ನನಗೆ ಗೊತ್ತಿಲ್ಲ. ಆಕೆಗೆ ಮದುವೆ ಆಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಗೌರಮ್ಮ ಹಾಗೂ ಮಿಣಕಮ್ಮ ವಿವಾಹಿತರಾಗಿದ್ದು ಅವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಆದ್ದರಿಂದ ಈ ದಾವೆ ಊರ್ಜಿತವಾಗತಕ್ಕದ್ದಲ್ಲ ಎಂದರೆ ಸರಿಯಲ್ಲ.

2. ನನ್ನ ತಂಗಿ ಪ್ರತಿವಾದಿ-4 ಮೃತಪಟ್ಟು ಈಗ್ಗೇ 1 ವರ್ಷ ಆಯಿತು. ಆಕೆಗೆ ವಿವಾಹವಾಗಿರಲಿಲ್ಲ. ನನ್ನ ಅಣ್ಣ ಗುರುಸ್ವಾಮಿ ಮೃತಪಟ್ಟಿರುತ್ತಾರೆ, ಆತನ ಹೆಂಡತಿ ನಾಗಮ್ಮಳನ್ನು ಹಾಗೂ ಅವರ ಮಕ್ಕಳಾದ ರವಿ ಹಾಗೂ ಚಂದ್ರ ರನ್ನೂ ಕೂಡ ಈ ದಾವೆಯಲ್ಲಿ ಪ್ರತಿವಾದಿ-15 ರಿಂದ 17 ಎಂದು ಪಕ್ಷಗಾರರನ್ನಾಗಿ ಮಾಡಲಾಗಿದೆ. ಪ್ರತಿವಾದಿ-15 ರಿಂದ 17 ಎಲ್ಲಾ ಜೊತೆಯಲ್ಲಿ ಇದ್ದಾರೆ. ಈ ದಾವೆಯನ್ನು ನಾನು ದಾವಾ ಸ್ವತ್ತುಗಳಲ್ಲಿ ಭಾಗಾಂಶ ಕೋರಿ ಸಲ್ಲಿಸಿದ್ದೇನೆ. ಯಾವ-ಯಾವ ಸ್ವತ್ತುಗಳಲ್ಲಿ ಭಾಗ ಕೋರಿ ಈ ದಾವೆ ಸಲ್ಲಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ. ನನ್ನ ತಾತ ಅಪ್ಪಯ್ಯನಿಗೆ ಸೇರಿದ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ದಾವಾ ಸ್ವತ್ತುಗಳನ್ನಾಗಿ

ಸೇರಿಸಿದ್ದೇನೆ. ಆದರೆ ಮದ್ದಹಳ್ಳಿಯಲ್ಲಿ ಇರುವ ನನ್ನ ತಾತನ 16 ಕಂಬದ ತೊಟ್ಟಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನನ್ನ ತಾತನ ಎಲ್ಲಾ ಆಸ್ತಿಗಳನ್ನು ಸೇರಿಸದೇ ಇರುವ ಕಾರಣ ದಾವೆ ಊರ್ಜಿತವಾಗತಕ್ಕದ್ದಲ್ಲ ಎಂದರೆ ಸರಿಯಲ್ಲ.

3.ನನ್ನ ತಂದೆಯ ಸಹೋದರರಾದ ಮರಪ್ಪ ಮತ್ತು ನಿಂಗಪ್ಪ ಬೇರೆ ಬೇರೆ ವಾಸವಾಗಿದ್ದಾರೆ ಎಂದರೆ ಸರಿ. ಸುಮಾರು 30-40 ವರ್ಷಗಳಿಂದ ಅವರು ಬೇರೆ ಬೇರೆ ಇದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪಂದಿರು ಸುಮಾರು 30-40 ವರ್ಷಗಳ ಹಿಂದೆಯೇ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತು-4 ಪ್ರತಿವಾದಿ-11 ಮತ್ತು 12 ರವರ ತಂದೆಯಾದ ಮರಪ್ಪನ ಪಾಲಿಗೆ ಬಂದಿತ್ತು ಎಂದರೆ ಸರಿಯಲ್ಲ. ಅವರ ತಂದೆಯ ಭಾಗಕ್ಕೆ ಬಂದಿದ್ದಂತಹ ದಾವಾ ಸ್ವತ್ತು-4 ನ್ನು ಪ್ರತಿವಾದಿ-11 ಮತ್ತು 12 ರವರು ದಿ.22-03-2006 ರಂದು ಪ್ರತಿವಾದಿ-14 ರವರಿಗೆ ಶುದ್ಧಕ್ರಯ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಕ್ರಯಕ್ಕೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ ದಾವಾ ಸ್ವತ್ತು-4 ನ್ನು ಕ್ರಯಕ್ಕೆ ಪಡೆದಾಗಿನಿಂದ ಪ್ರತಿವಾದಿ-14 ರವರೇ ಅದರ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ. ದಾವಾ ಸ್ವತ್ತು-4 ರಲ್ಲಿ ನನಗಾಗಲಿ ಉಳಿದ ಪ್ರತಿವಾದಿಗಳಿಗಾಗಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

4. ನಾನು ಓದು ಬರಹ ಕಲಿತಿಲ್ಲ, ನನಗೆ ದಾವಾ ಸ್ವತ್ತುಗಳ ಸರ್ವೇ ನಂಬರ್ ಬಗ್ಗೆ ಗೊತ್ತಿಲ್ಲ. ನನಗೆ ನನ್ನ ತಾತನ ಆಸ್ತಿ ಯಾವು ಯಾವು ಎಂದು ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ತಾಲ್ಲೂಕು ಕಚೇರಿಯಲ್ಲಿ ದಾವಾ ಸ್ವತ್ತುಗಳ ದಾಖಲೆಗಳನ್ನು ಪಡೆದು ಈ ದಾವೆ ಹೂಡಿದ್ದೇನೆ. ದಾವಾ ಸ್ವತ್ತುಗಳ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಬಗ್ಗೆ ನನಗೇನು ಗೊತ್ತಿಲ್ಲ ಹಾಗೂ ಅದನ್ನು ಗುರುತಿಸಲು ಅನರ್ಹನಾಗಿರುವುದರಿಂದ ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಈಗಾಗಲೇ ನನ್ನ ತಂದೆ ಹಾಗೂ ಚಿಕ್ಕಪ್ಪಂದಿರ ನಡುವೆ ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು-6 ನ್ನು ಪ್ರತಿವಾದಿ-11 ಮತ್ತು 12 ರವರ ತಂದೆಯಾದ ಮರಪ್ಪನವರು ದಿ.11-07-1977 ರಲ್ಲಿ ನೋಂದಾಯಿತ ಕ್ರಯ ಪತ್ರದ ಮುಖಾಂತರ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು-6 ಮರಪ್ಪನವರ ಸ್ವಯಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು-6 ರಲ್ಲಿ ನನಗಾಗಲಿ ಹಾಗೂ ಇತರೇ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು-6 ನ್ನು ಪ್ರತಿವಾದಿ-11 ಮತ್ತು 12 ರವರು ಸಮಾನವಾಗಿ ವಿಭಾಗ ಮಾಡಿಕೊಂಡು ಅವರವರ ಭಾಗದಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸಾಕ್ಷಿಯ ಹೌದು ಎಂದು

ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಅದು ಮರಪ್ಪನವರ ಸ್ವಯಾರ್ಜಿತ ಸ್ವತ್ತೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**